ಅ. ಒಂದು ಭಾಷೆಯ ಇತಿಹಾಸದಲ್ಲಿ ಸಾಹಿತ್ಯರಚನೆಯು ತೋಂಡೀ (ಓರಲ್) ವಿಧಾನದಿಂದ ಬರಹದ ಕಡೆಗೆ ತಿರುಗುವ ಹಂತವು ಬಹಳ ಮುಖ್ಯ. ಈ ಪ್ರಕ್ರಿಯೆಯು ಕನ್ನಡದಲ್ಲಿ ಇಡಿಯಾಗಿ ಜರುಗಿದ್ದು ಪಂಪನ ಕಾಲದಲ್ಲಿಯೇ. ಆದ್ದರಿಂದಲೇ ಅವನ ಕಾವ್ಯಗಳು 'ಮೌಖಿಕ' ಮತ್ತು 'ಲಿಖಿತ' ಎಂಬ ಎರಡೂ ನೆಲೆಗಳಲ್ಲಿಯೂ ಕೆಲಸಮಾಡುತ್ತವೆ. ಈ ಗುಣವು ಅವನ ಕಾವ್ಯಗಳ ಜೀವಂತಿಕೆಗೂ ಕಾರಣವಾಗಿದೆ. ಅವುಗಳನ್ನು ಸರಿಯಾಗಿ ಓದುವ ಮತ್ತು ರಿಸೈಟ್ ಮಾಡುವ ಬಗೆಗಳನ್ನು ನಾವು ನಿಧಾನವಾಗಿ ಕಳೆದು ಕೊಳ್ಳುತ್ತಿದ್ದೇವೆ. ಹಾಗೆ ನೋಡಿದರೆ, ಪಂಪನ ಕಂದ ಪದ್ಯಗಳನ್ನು ಮತ್ತು ವೃತ್ತಗಳನ್ನು ಓದುವಾಗ ಆಡುಮಾತಿನ ಲಯ–ಧಾಟಿಗಳು ಪಂಡಿತ ಭಾಷೆಯ ಸಂಗಾತದಲ್ಲಿಯೇ ಬರುತ್ತವೆ, ನಮ್ಮ ಕಾಲದ ಬೇಂದ್ರೆ, ಕುವೆಂಪು ಮತ್ತು ಅಡಿಗರಲ್ಲಿಯೂ ಈ ಜೋಡಿನೆಲೆಗಳನ್ನು ಗುರುತಿಸಬಹುದು. ಪಂಪನಲ್ಲಿ ಹಲವು ಭಾಗಗಳು ದ್ರಾವಿಡಸಹಜವಾದ ಗೇಯತೆಗೂ ಒಗ್ಗಿಕೊಳ್ಳುತ್ತವೆ.

ಆ. ಇಷ್ಟೇ ಮುಖ್ಯವಾದ ಇನ್ನೊಂದು ಸಂಗತಿಯೆಂದರೆ, ಪಂಪನ ಕಾವ್ಯಗಳು ಕನ್ನಡವು ತನ್ನ 'ದ್ರಾವಿಡತನ'ದಿಂದ ದೂರ ಚಲಿಸಿ, ಸಂಸ್ಕೃತದ ಕಡೆಗೆ ಮಾಡಿದ ಚಲನೆಯ ಪ್ರಮುಖ ಮಾದರಿಗಳು. ಈ ಮಾತು ಅವನಿಗಿಂತ ಹಿಂದಿನ ಮತ್ತು ಅವನಿಗೆ ಸಮಕಾಲೀನವಾದ ತಮಿಳು ಕೃತಿಗಳನ್ನು ಗಮನಿಸಿದಾಗ ಸ್ಪಷ್ಟವಾಗುತ್ತದೆ. ತಮಿಳು ಅನ್ಯಪ್ರಭಾವಗಳನ್ನು ದೂರವಿರಿಸುವ 'ಎಕ್ಸ್ ಕ್ಲೂಸಿವ್' ಹಾದಿಯನ್ನು ಆರಿಸಿಕೊಂಡರೆ, ಕನ್ನಡವು ಅನ್ಯವನ್ನು ಅರಗಿಸಿಕೊಂಡು ಬೆಳೆಯುವ 'ಇನ್ ಕ್ಲೂಸಿವ್' ನೆಲೆಗಳ ಕಡೆಗೆ ತಿರುಗಿತು. ಇದು ಕನ್ನಡ ಸಾಹಿತ್ಯದ ಬೆಳವಣಿಗೆಯ ರೂಪುರೇಷೆಗಳನ್ನೇ ನಿರ್ಧರಿಸಿತೆಂದು ತೋರುತ್ತದೆ. ಕವಿರಾಜಮಾರ್ಗದಲ್ಲಿ ಮೊದಲಾದ ಈ ನಿಲುವು ಪಂಪನಲ್ಲಿ ಖಚಿತವಾದ ಆಕಾರಗಳನ್ನು ಪಡೆದುಕೊಂಡಿತು. ಭಾಷೆಯ ನೆಲೆಯಲ್ಲಿ ಇದು ಪೂರ್ವದ ಹಳಗನ್ನಡದಿಂದ ಹಳಗನ್ನಡದ ಕಡೆಗೆ ಮಾಡಿದ ಚಲನೆಗೆ ಕೂಡ ಸಾಕ್ಷಿಯಾಗಿದೆ. ಸ್ವಲ್ಪಮಟ್ಟಿಗೆ ಜೈನ ಕಾವ್ಯಗಳ ಮೂಲನೆಲೆಗಳು 'ಪ್ರಾಕೃತ'ದಲ್ಲಿ ಇರುವುದರಿಂದ ಅದು ಕೂಡ ಉತ್ತರ ಭಾರತದ ಕಡೆಯ ಒಲುವೆಗಳಿಗೆ ಕಾರಣವಾಯಿತು.

ಇ. ಪಂಪನ ಕಾವ್ಯದ ಕಥೆ ಮತ್ತು ಆಶಯಗಳು ಕರ್ನಾಟಕದಲ್ಲಿ ಮೈಪಡೆದವಲ್ಲ. ಅವನು ತೀರ್ಥಂಕರರ ಜೀವನ ಮತ್ತು ಮಹಾಭಾರತಗಳನ್ನು ಕರ್ನಾಟಕದ ಸಂಸ್ಕೃತಿಗೆ ಬಹಳ ಚೆನ್ನಾಗಿ ಕಸಿ ಮಾಡಿದವನು. ಕನ್ನಗಿ–ಕೋವಲರ ಕಥೆಯಾದ 'ಸಿಲಪ್ಪದಿಕಾರಂ' ತಮಿಳುನಾಡಿನ ನೆಲದಲ್ಲಿಯೇ ಒಡಮೂಡಿದ ಕಥೆ, ಕಥನ. ಪಂಪನು ಮಾಡಿದ ಉತ್ತರಮುಖಿಯಾದ ಪ್ರಯಾಣಕ್ಕೆ ವಿದಾಯ ಹೇಳಲು ಸಾಧ್ಯವಾಗಿದ್ದು ಹರಿಹರ ಮತ್ತು 'ಶಿಖರಸೂರ್ಯ'ದ ಕಂಬಾರರಿಗೆ ಮಾತ್ರ. ವೈದಿಕ ಸಂಸ್ಕೃತಿಯನ್ನು ಎದುರು ಹಾಕಿಕೊಂಡ ವಚನಕಾರರೂ ತಮಗೆ ದೂರವಾದ ದಕ್ಷಿಣದಲ್ಲಿದ್ದ ದ್ರಾವಿಡ ನೆಲೆಗಳ ಕಡೆಗೆ ಚಲಿಸಲಿಲ್ಲ. ಬೇಂದ್ರೆಯವರೂ ಸೇರಿದಂತೆ ಉಳಿದ ಹಲವರಲ್ಲಿ 'ಆರ್ಯ ಆತ್ಮ' ಮತ್ತು 'ದ್ರಾವಿಡ ಶರೀರ'ಗಳ ರಾಜ್ಯಭಾರವೇ ಇದೆ. ಇದಕ್ಕಿಂತ ಭಿನ್ನವಾಗಿದ್ದ ಜನಪದ ಮಹಾಕಾವ್ಯಗಳ ಕಡೆಗೆ ನಮ್ಮ ಗಮನ ಹರಿಯಲೇ ಇಲ್ಲ. ನಾನು ನಮ್ಮ ಕಾಲದ ಕಥೆ ಕಾದಂಬರಿಗಳ ಮಾತನ್ನು ಹೇಳುತ್ತಿಲ್ಲ. ನಮ್ಮ ಕಾಲದ ಜೀವನಕ್ರಮವೇ ಅಚ್ಚ ದ್ರಾವಿಡವಲ್ಲ.

ಈ. ಕನ್ನಡ ಕವಿಗಳಲ್ಲಿ ಅಕ್ಷರ ಛಂದಸ್ಸು, ಮಾತ್ರಾ ಛಂದಸ್ಸು ಮತ್ತು ಅಂಶ ಛಂದಸ್ಸುಗಳನ್ನು ಸಮರ್ಥವಾಗಿ ಬಳಸಿದ ಒಬ್ಬನೇ ಕವಿ ಪಂಪ. ರಗಳೆ, ಸಾಂಗತ್ಯ, ಏಳೆಗಳಂತಹ ಗೇಯ ಛಂದೋರೂಪಗಳ ಮೂಲ ಮಾದರಿಗಳನ್ನೂ ಅವನಲ್ಲಿ ಕಂಡುಕೊಳ್ಳಲಾಗಿದೆ. ಈ ವೈವಿಧ್ಯಕ್ಕೆ ಅವನು ಜೀವಿಸಿದ್ದ ಕಾಲ ಒಂದು ಕಾರಣವಾದರೆ ಪಂಪನ ಪ್ರಯೋಗಶೀಲತೆ ಇನ್ನೊಂದು ಕಾರಣ. ಅವನು ಕವಿತೆಯ ಆಶಯ ಮತ್ತು ಆಕೃತಿಗಳ ನಡುವಿನ ಅವಿನಾಸಂಬಂಧವನ್ನು ತಿಳಿದವನು. ಹಾಗಲ್ಲದೆ